I set

ಅಸಲ ದಾವಾ ನಂ:108/2022

# ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಹುನಗುಂದರವರ ನ್ಯಾಯಾಲಯದಲ್ಲಿ

1) ಶ್ರೀ. ಸಂಗಪ್ಪ ತಂದೆ ಚನ್ನಪ್ಪ ಗೌಡರ
ಸಾ॥ ಅಮರಾವತಿ, ತಾ॥ ಹುನಗುಂದ
ವ ಇತರರು.

---ವಾದಿಯರು

--ವಿರುದ್ಧ--

1) ಶ್ರೀ. ಅಮರೇಶ ತಂದೆ ಬೈಲಪ್ಪ ಗೌಡರ
ಸಾ॥ ಅಮರಾವತಿ, ತಾ॥ ಹುನಗುಂದ
ವ ಇತರರರು

---ಪ್ರತಿವಾದಿಯರು

## ವ್ಯವಹಾರ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 8 ನಿಯಮ 1 ರಡಿ ಕೈಫಿಯತ್

ಇದರಲ್ಲಿ 2ನೇ ಪ್ರತಿವಾದಿಯರು ಮಾನ್ಯ ನ್ಯಾಯಾಲಯಕ್ಕೆ ವಿನಂತಿ ಪೂರ್ವಕವಾಗಿ ಸಲ್ಲಿಸುವ ವಿನಂತಿ ಕೈಫಿಯತ್ ಪತ್ರ ಏನೆಂದರೆ,

1) ವಾದಿಯರ ದಾವೆಯು ಪ್ರಾಮಾಣಿಕತನದ್ದು ಇರುವದಿಲ್ಲ. ವಾದಿಯರು ತಮ್ಮ ದಾವೆಯಲ್ಲಿ ವಿದಾನಿಸಿದ ಸಂಗತಿಗಳು ನಿಜ ಇರುವದಿಲ್ಲ. ಈ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ಸ್ಪಷ್ಟವಾಗಿ ಒಪ್ಪಿಕೊಂಡ ಕೆಲವು ಸಂಗತಿಗಳನ್ನು ಹೊರತುಪಡಿಸಿ ವಾದಿಯರು ತಮ್ಮ ವಾದ ಪತ್ರದಲ್ಲಿ ವಿವರಿಸಿದ ಯಾವತ್ತೂ ಸಂಗತಿಗಳನ್ನು ಈ ಪ್ರತಿವಾದಿಯು ಅಲ್ಲಗಳೆಯುತ್ತಾನೆ.

2) ವಾದಿಯರ ಮನೆತನದ ಮೂಲ ಪುರುಷ ಚನ್ನಪ್ಪ ಹಾಗು ಅವನ ಹೆಂಡತಿ ಹನಮವ್ವ ಇವರು ಮೈತವಾಗಿದ್ದು ಅವರಿಗೆ ಗೌರಮ್ಮ ಮತ್ತು ಗಂಗಮ್ಮ ಮತ್ತು ಬಸಪ್ಪ ಹಾಗೂ ಸಂಗಪ್ಪ ಅಂತಾ ನಾಲ್ಕು ಜನ ಮಕ್ಕಳಿದ್ದು ಗೌರಮ್ಮ ಮತ್ತು ಗಂಗಮ್ಮ ಇವರು 1956 ನೇ ಇಸ್ವಿಗಿಂತಲೂ ಮೊದಲು ಹುಟ್ಟಿದ ಕಾರಣ ಅವರನ್ನು ಸದರ ದಾವೆಯಲ್ಲಿ ಸೇರ್ಪಡೆ ಮಾಡಿರುವದಿಲ್ಲಾ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಬಸಪ್ಪ ಈತನೂ ಸಹ ಮೈತವಾಗಿದ್ದು ಅವನ ಹೆಂಡತಿ ರುದ್ರಮ್ಮ ಇವಳನ್ನು 2ನೇ ವಾದಿ ಇರುತ್ತಾಳೆ ಅನ್ನುವ ಸಂಗತಿ ನಿಜ ಇರುವದಿಲ್ಲ. ಮೈತ ಚನ್ನಪ್ಪನ ಕೊನೆಯ ಮಗನಾದ ಸಂಗಪ್ಪ ಇವನು ಈ ಪ್ರಕರಣದ 1ನೇ ವಾದಿ ಇರುತ್ತಾನೆ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಆದರೆ ಪ್ರತಿವಾದಿಯರು ವಾದಿಯರ ಮನೆತನಕ್ಕೆ ಯಾವುದೇ ರೀತಿ ಸಂಬಂಧ ಇರುವದಿಲ್ಲಾ ಅನ್ನುವ ಸಂಗತಿ ನಿಜ ಇರುವದಿಲ್ಲಾ.

3) ಹುನಗುಂದ ತಾಲೂಕ ಪೈಕಿ ಅಮರಾವತಿ ಗ್ರಾಮದ ರಿ.ಸ.ನಂ. 188, ವಿಸ್ತೀರ್ಣ 16 ಎಕರೆ, 02 ಗುಂಟೆ ಇದು ಮೂಲತಃ ರಾಮಪ್ಪಗೌಡ ಸರದೇಸಾಯಿ ಸಾ॥ ಅಮರಾವತಿ ಇವರ ಮಾಲ್ಕಿಯ ಜಮೀನು ಇತ್ತು ಅನ್ನುವ ಸಂಗತಿ ನಿಜ ಇರುತ್ತದೆ. ಸದರಿ ಜಮೀನನ್ನು ವಾದಿಯರ ಮನೆತನದ ಮೂಲ ಪುರುಷನಾದ ಚನ್ನಪ್ಪ ಈತನು ಸಾಗುವಳಿ ಮಾಡುತ್ತಿದ್ದು ಈ ಕಾರಣದಿಂದ ಕರ್ನಾಟಕ ಭೂ ಸುಧಾರಣೆ ಕಾಯ್ದೆಯ ಅಡಿಯಲ್ಲಿ ನಮೂನೆ ಸಂಖ್ಯೆ "7" ತುಂಬಿ ತನ್ನನ್ನು ಸದರ ಮೇಲ್ಕಾಣಿಸಿದ ಜಮೀನಿನ ಅನುಭವದಾರ ಅಂತಾ ಪರಿಗಣಿಸಲು ಕೇಳಿ ಕೊಳ್ಳಲಾಗಿತ್ತು ಅನ್ನುವ ಸಂಗತಿ ನಿಜ ಇರುವದಿಲ್ಲಾ. ಸದರ ಪ್ರಕರಣದ ವಿಚಾರಣೆ ಮಾಡಿದ ಭೂ ನ್ಯಾಯ ಮಂಡಳಿ, ಹುನಗುಂದ ಇವರು ದಿನಾಂಕ : 06-09-1975 ರಂದು ಮೈತ ಚನ್ನಪ್ಪನನ್ನು ಅನುಭವದಾರ ಅಂತಾ ನಿರ್ಣಯಿಸಿ ಆದೇಶ ಹೊರಡಿಸಿದ್ದು ಇರುತ್ತದೆ ಅನ್ನುವ ಸಂಗತಿ ನಿಜ ಇರುವದಿಲ್ಲ. ಸದರಿ ವಿಷಯಕ್ಕೆ ಸಂಬಂಧಪಟ್ಟಂತೆ ದಿನಾಂಕ 09-11-1981 ರಂದು ನಮೂನೆ ಸಂಖ್ಯೆ "10" ನೀಡಿದ್ದು ಅಂದಿನಿಂದ ಸದರ ಜಮೀನ ಯಾವುದೇ ರೀತಿ 15 ವರ್ಷಗಳೊಳಗಾಗಿ ವರ್ಗಾಯಿಸುವದನ್ನು ಪ್ರತಿಬಂಧಿಸಲಾಗಿದೆ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಅದರ ಪ್ರಕಾರ ಕೇವಲ ಅನುಭವದಾರನ ಕುಟುಂಬವನ್ನು ಹೊರತು ಪಡಿಸಿ ಯಾವುದೇ ವರ್ಗಾವಣೆಗಳನ್ನು ನಿಷೇಧಿಸಲಾಗಿದೆ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಸದರ ನಮೂನೆ ಸಂಖ್ಯೆ "10" ರ ಪ್ರಕಾರ "ಡ" ಸಂಖ್ಯೆ 1057 ರಚನೆಯಾಗಿ ವಾದಿಯರ ಮನೆತನದ ಮೂಲ ಪುರುಷನಾದ ಚನ್ನಪ್ಪ ಈತನ ಹೆಸರನ್ನು ಕಂದಾಯ ಇಲಾಖೆಯ ಹ।ರ। ಉತಾರದ ವಿಭಾಗ ಸಂಖ್ಯೆ 9 ರಲ್ಲಿ ನಮೂದಿಸಲಾಗಿದೆ ಅನ್ನುವ ಸಂಗತಿ ನಿಜ ಇರುವದಿಲ್ಲಾ.

4) ವಾದಿಯರ ಮನೆತನದ ಮೂಲ ಪುರುಷನಾದ ಚನ್ನಪ್ಪನು ಅವಿದ್ಯಾವಂತನಿದ್ದು ಅವನ ಹಿರಿಯ ಮಗನಾದ ಬಸಪ್ಪ ಈತನು 1977ನೇ ಇಸ್ವಿಯಲ್ಲಿ ಮೈತವಾಗಿದ್ದು ಅವನ ಹೆಂಡತಿ 2ನೇ ವಾದಿ ರುದ್ರವ್ವ ಇವಳು ಅಶಿಕ್ಷಿತಳಿದ್ದು ಹಾಗೂ ಮೈತ ಚನ್ನಪ್ಪನ 2ನೇ ಮಗನಾದ ಸಂಗಪ್ಪ ಈತನು ಆದ್ಯಾತ್ಮಿಕದ ಕಡೆಗೆ ಒಲವು ಮೂಡಿ ಅನೇಕ ಕ್ಷೇತ್ರಗಳ ಸಂಚಾರ ಗೈಯುತ್ತ ತನ್ನ ಜೀವನದ ಬಹುಭಾಗವನ್ನು ಪರಸ್ಥಳದಲ್ಲಿಯೇ ಕಳೆದಿದ್ದಾನೆ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಹೀಗೆ ವಾದಿಯರ ಮನೆತನದ ಈ ಪರಿಸ್ಥಿತಿ ಗೊತ್ತಿದ್ದ ಅವರ ದೂರದ ಸಂಬಂಧಿಯಾದ 1ನೇ ಪ್ರತಿವಾದಿಯ ತಂದೆಯು 1981 ರಲ್ಲಿ ಅಂದರೆ ಮೈತ ಚನ್ನಪ್ಪನ ಜೀವಿತ ಕಾಲದಲ್ಲಿ ವಾದಿಯರ ಮನೆತನದಲ್ಲಿ ಒಂದು ವಾಟ್ನಿ ಆಗಿದೆ ಅಂತಾ ಮೈತ ಚನ್ನಪ್ಪನ ಹೆಸರಿನಿಂದ ಒಂದು ಸುಳ್ಳು ವರದಿ ಸಲ್ಲಿಸಿ, ಅವರ ಮನೆತನಕ್ಕೆ ಸಂಬಂಧವಿರದ ತನಗೆ ವಾಟ್ನಿ ವ್ಯವಹಾರದಲ್ಲಿ 8ಎಕರೆ 2ಗುಂಟೆ ಬಂದಿದೆ ಅಂತಾ ಖೊಟ್ಟಿ ದಾಖಲೆ ಸೃಷ್ಟಿಸಿದ್ದು ಅದರಲ್ಲಿ ಮೈತ ಚನ್ನಪ್ಪನಿಗೆ 4ಎಕರೆ

ಹಾಗೂ 2ನೇ ವಾದಿ ರುದ್ರವ್ವಳಿಗೆ 4 ಎಕರೆ ಬಂದಿದೆ ಅಂತಾ ಕಾಣಿಸಿದ್ದು ಅದರಲ್ಲಿ 1ನೇ ವಾದಿ ಅಂದರೆ ಮೃತ ಚನ್ನಪ್ಪನ ಎರಡನೇ ಮಗನಿಗೆ ಯಾವುದೇ ಹಿಸ್ಸಾ ಇರದೇ ಅವನ ಹೆಸರು ಪ್ರಸ್ತಾಪಿಸದೇ ಆಗಿರಲಾರದ ವಾಟ್ನಿ ವ್ಯವಹಾರವನ್ನು ಹೇಳಿ ಸದರ ವಾದಿಯರ ಮನೆತನದವರಿಗೆ ತಿಳಿಯಗೊಡದೇ ಮೃತ ಚನ್ನಪ್ಪನ ಕುಟುಂಬಕ್ಕೆ ಸಂಬಂಧ ವಿರಲಾರದೆ ಮೃತ ಬೈಲಪ್ಪ ತಂದೆ ಮರಿಬಸಪ್ಪ ಗೌಡ್ರ ಇವನು ವಾದಿಯರ ಮನೆತನದ ಆಸ್ತಿ ಎತ್ತಿ ಹಾಕುವ ಯೋಚನೆಯಿಂದ ಸುಳ್ಳು ವರದಿ ಕೊಟ್ಟು ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒಂದು ಮಾಡಿಕೊಂಡು "ಡ" ಉತಾರ ಹುಟ್ಟಿಸಿದ್ದಾರೆ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಆದರೆ ಮೃತ ಚನ್ನಪ್ಪನ ಕಾಲದಿಂದ ಇಲ್ಲಿಯವರೆಗೂ ವಾದಿಯರ ಮನೆತನದಲ್ಲಿ ಯಾವುದೇ ವಾಟ್ನಿ ವಗೈರೆ ಆಗಿರುವದಿಲ್ಲಾ ಅನ್ನುವ ಸಂಗತಿ ನಿಜ ಇರುವದಿಲ್ಲಾ.

5) ವಾದಿಯರ ಕುಟುಂಬಕ್ಕೆ ಯಾವುದೇ ರೀತಿ ಸಂಬಂಧವಿರದ ಮೃತ ಬೈಲಪ್ಪನು ತಾನೂ ಸದರ ವಾದಿಯರ ಮನೆತನದ ಏಕತ್ರ ಕುಟುಂಬದ ಸದಸ್ಯ ಅಂತಾ ಬಿಂಬಿಸಿ ಸುಳ್ಳು ವರದಿಯನ್ನು ಮೃತ ಚನ್ನಪ್ಪನ ಹೆಸರಿನಿಂದ ಸಲ್ಲಿಸಿ ಖೊಟ್ಟಿ "ಡ" ಉತಾರ ತಯಾರಾಗಿದ್ದು ಇದರಿಂದ ದಾವಾದ ಆಸ್ತಿಗಳಲ್ಲಿ ವಾದಿಯರಿಗೆ ಇರುವ ದಿವಾಣಿ ಹಕ್ಕುಗಳು ನಷ್ಟವಾಗಲಾರವು ಅನ್ನುವ ಸಂಗತಿ ನಿಜ ಇರುವದಿಲ್ಲ. ಸದರ ಜಮೀನಿನ ಕುರಿತು ಸರಕಾರ ಬೀಡಿದ ನಮೂನೆ ಸಂಖ್ಯೆ "10" ರಲ್ಲಿ ಕಾಣೀಸಿದ ಷರತ್ತುಗಳ ಪ್ರಕಾರ ಮೃತ ಚನ್ನಪ್ಪನ ಕುಟುಂಬದ ಹೊರತಾಗಿ ಉಳಿದವರಿಗೆ ಸದರ ಜಮೀನಿನ ಯಾವುದೇ ಭಾಗ ವರ್ಗಾಯಿಸಲು ಬರಲಾರದು ಅನ್ನುವ ಸಂಗತಿ ನಿಜ ಇರುವದಿಲ್ಲಾ. ಕಾರಣ ಸದರ ವರ್ಗಾವಣೆ ಸುಳ್ಳು ಹಾಗೂ ರದ್ದುಗೊಳಿಸಬಹುದಾದ್ದು ಇದ್ದು ಕಾನೂನು ಬಾಹಿರ ನಡುವಳಿಕೆಯಿಂದ ಕೂಡಿದ್ದು ಸದರ "ಡ" ಸಂಖ್ಯೆ 1105ರ ಮುಖಾಂತರ ಆಗಿರುವ ವರ್ಗಾವಣೆ ವಾದಿಯರ ಮೇಲೆ ಭದ್ದವಿರುವದಿಲ್ಲ ಅನ್ನುವ ಸಂಗತಿ ನಿಜ ಇರುವದಿಲ್ಲ. ತದನಂತರ ಪ್ರತಿವಾದಿಯರ ಹೆಸರಿನಿಂದ ಆಗಿರುವ ವರ್ಗಾವಣೆಗಳೂ ಸಹ ವಾದಿಯರ ಮೇಲೆ ಬದ್ಧ ಇರುವದಿಲ್ಲ ಅನ್ನುವ ಸಂಗತಿ ನಿಜ ಇರುವದಿಲ್ಲಾ.

6) ಮೃತ ಬೈಲಪ್ಪನು ಮುಂದೆ ಸದರ ದಾವಾದ ಆಸ್ತಿಯನ್ನು ಪ್ರತಿವಾದಿಯರಿಗೆ ವರ್ಗಾಯಿಸಿದ್ದು ಸದರ ವರ್ಗಾವಣೆಗಳೂ ಸಹಃ ವಾದಿಯರ ಮೇಲೆ ಬಂಧನಕಾರಿ ಇರುವದಿಲ್ಲಾ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಇಂದಿಗೂ ದಾವಾದ ಜಮೀನುಗಳು ಸಂಪೂರ್ಣವಾಗಿ ವಾದಿಯರ ಮನೆತನದ ಕಬ್ಜಾ ವಹಿವಾಟಿಯಲ್ಲಿ ಅವೆ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಸದರ ಜಮೀನುಗಳನ್ನು ಪ್ರತಿವಾದಿಯರು ಎಂದೂ ಯಾವಕಾಲಕ್ಕೂ ಸಾಗುವಳಿ ಮಾಡಿರುವದಿಲ್ಲಾ ಅನ್ನುವ ಸಂಗತಿ ನಿಜ ಇರುವದಿಲ್ಲಾ. ಕಾರಣ ಪಟ್ಟಿ ರಚಿತವಾದ "ಡ" ಸಂಖ್ಯೆ

1105 ಹಾಗೂ ಅದರ ಆಧಾರದ ಮೇಲೆ ಆಗಿರುವ ವರ್ಗಾವಣೆಗಳು ರದ್ದು ಅವೆ ಅಂತಾ ಠರಾಯಿಸಿ ಸದರ ದಾವಾದ ಆಸ್ತಿಗಳಿಗೆ ವಾದಿಯರೇ ಮಾಲಕರು ಅಂತಾ ಠರಾಯಿಸಿ ಅವುಗಳು ಕಬ್ಜಾ ವಹಿವಾಟ ಉಪಬೋಗಕ್ಕೆ ಪ್ರತಿವಾದಿಯರು ಅಡೆತಡೆ ಮಾಡಬಾರದು ಅಂತಾ ನಿರಂತರ ಮನಾಯಿ ತಾಕೀದಿ ಆದೇಶ ಕೇಳಿ ಸದರ ದಾವಾ ಮಾಡುವ ಭಾಗ ಬಿತ್ತು ಅನ್ನುವ ಸಂಗತಿ ನಿಜ ಇರುವದಿಲ್ಲಾ.

7) ವಾದಿಯರು ತಮ್ಮ ಮಾಹಿತಿಯಲ್ಲಿ ಇರುವ ಸತ್ಯ ಸಂಗತಿಗಳನ್ನು ಮರೆಮಾಚಿ ಸುಳ್ಳು ಸಂಗತಿಗಳನ್ನು ಸಾದಿಸಿ ಪ್ರಸುತ್ತ ದಾವೆಯನ್ನು ಮಾಡಿರುತ್ತಾರೆ.

8) ದಾವಾ ಜಮೀನು ರಿ.ಸ.ನಂಬರ 188/1 ವಿಸ್ತೀರ್ಣ 4 ಎಕರೆ 1 ಗುಂಟೆ ಮತ್ತು ರಿ.ಸ.ನಂಬರ 188/2 ವಿಸ್ತೀರ್ಣ 4 ಎಕರೆ 1 ಗುಂಟೆ ಇವುಗಳು ಜಮೀನು ರಿ.ಸ.ನಂಬರ 188 ವಿಸ್ತೀರ್ಣ 16 ಎಕರೆ 2 ಗುಂಟೆ ಇದರ ಒಂದು ಬಾಗವಾಗಿತ್ತು. ಸದರಿ ಜಮೀನು ಮೂಲತಃ ಗೇಣಿ ಹಕ್ಕಿನ ಜಮೀನು ಇತ್ತು. ವಾದಿಯ ಮನೆತನದ ಮೂಲ ಪುರುಷ ಚನ್ನಪ್ಪ ಬಸಪ್ಪ ಗೌಡ್ರ ಮತ್ತು 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರು ಒಂದೆ ಮನೆತನದವರು ಇರುತ್ತಾರೆ. ಸದರಿ ಜಮೀನನ್ನು ಮೂಲತಃ ಚನ್ನಪ್ಪ ಬಸಪ್ಪ ಗೌಡ್ರ ಮತ್ತು 1ನೇ ಪ್ರತಿವಾಧಿಯ ತಂದೆ ಬೈಲಪ್ಪ ಇವರು ಸಾಮೂಹಿಕ ಗೇಣಿದಾರರು ಅಂತಾ ಗೇಣಿದಾರ ಹಕ್ಕಿನಿಂದಾ ಸಾಗುವಳಿ ಮಾಡುತ್ತಿದ್ದರು. ಆದರೆ ಸದರಿ ಜಮೀನಿನ ಕಂದಾಯ ದಾಖಲೆಗಳಲ್ಲಿ ಸದರಿ ಚನ್ನಪ್ಪ ಬಸಪ್ಪ ಗೌಡ್ರ ಇವರ ಹೆಸರು ದಾಖಲ ಆಗಿತ್ತು. ಆದರೆ ಪೂರ್ವದಿಂದಲೂ ಸದರಿ ಜಮೀನನ್ನು ಚನ್ನಪ್ಪ ಬಸಪ್ಪ ಗೌಡ್ರ ಮತ್ತು 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರು ಸಾಮೂಹಿಕವಾಗಿ ಸಾಗುವಳಿ ಮಾಡುತ್ತಾ ಬಂದಿದ್ದರು. ಸದರಿ ಜಮೀನಿನ ಕಂದಾಯ ದಾಖಲೆಗಳಲ್ಲಿ 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರ ಹೆಸರು ದಾಖಲ ಇದ್ದ ಕಾರಣ ಕರ್ನಾಟಕ ಭೂ ಸುದಾರಣೆ ಕಾಯ್ದೆ ಜಾರಿಗೆ ಬಂದ ನಂತರ ಸದರಿ ಜಮೀನಿನ ಮೇಲಿನ ಗೇಣಿದಾರಿಕೆ ಹಕ್ಕನ್ನು ಕೋರಿ ಸದರಿ ಚನ್ನಪ್ಪ ಬಸಪ್ಪ ಗೌಡ್ರ ಇವರು ಭೂ ನ್ಯಾಯ ಮಂಡಳಿಗೆ ಅರ್ಜಿ ಸಲ್ಲಿಸಿದ್ದರು. ಮಾನ್ಯ ಭೂ ನ್ಯಾಯ ಮಂಡಳಿಯವರು ಸದರಿ ಅರ್ಜಿಯ ಮೇಲೆ ಸದರಿ ಚನ್ನಪ್ಪ ಬಸಪ್ಪ ಗೌಡ್ರ ಇವರ ಹೆಸರಿನಲ್ಲಿ ಅನುಬೋಗದ ಹಕ್ಕನ್ನು ಮಂಜೂರ ಮಾಡಿದ್ದು ಇರುತ್ತದೆ. ಸದರಿ ಜಮೀನು ಚನ್ನಪ್ಪ ಬಸಪ್ಪ ಗೌಡ್ರ ಇವರ ಹೆಸರಿನಲ್ಲಿ ಮಂಜೂರ ಆದರೂ ಕೂಡಾ ಸದರಿ ಜಮೀನನ್ನು ಚನ್ನಪ್ಪ ಬಸಪ್ಪ ಗೌಡ್ರ ಮತ್ತು 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರು ಸದರಿ ಜಮೀನನ್ನು ತಮ್ಮ ಸಾಮೂಹಿಕ ಮಾಲ್ಕಿ ಹಕ್ಕಿನ ಜಮೀನು ಅಂತಾ ಪರಿಗ್ರಹಿಸಿ ಸಾಮೂಹಿಕವಾಗಿ ಸಾಗುವಳಿ ಮಾಡುತ್ತಾ ಬಂದಿದ್ದು ಇರುತ್ತದೆ.

ಸದರಿ ಜಮೀನು ರಿ.ಸ.ನಂಬರ 188 ರಲ್ಲಿ ಸದರಿ ಚನ್ನಪ್ಪ ಬಸಪ್ಪ ಗೌಡ್ರ ಇವರಿಗೆ 1/2 ಹಿಸ್ಸೆ ಮತ್ತು 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರಿಗೆ 1/2 ಹಿಸ್ಸೆ ಇತ್ತು.

9) ನಂತರ 1981 ರಲ್ಲಿ ಸದರಿ ಚನ್ನಪ್ಪ ಬಸಪ್ಪ ಗೌಡ್ರ ಮತ್ತು 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರ ನಡುವೆ ಅಪಸಾತನಲ್ಲಿ ಪಾಲು ವಾಟಣಿ ಆಗಿರುತ್ತದೆ. ಸದರಿಯವರು ಒಂದೇ ಮನೆತನದವರು ಇದ್ದ ಕಾರಣ ಅವರ ನಡುವೆ ಪಾಲುವಾಟಣಿ ಆಗುವದು ಕರ್ನಾಟಕ ಭೂ ಸುದಾರಣೆ ಕಾಯ್ದೆ ಅಡಿಯಲ್ಲಿಯ ಪ್ರಕರಣಕ್ಕೆ ವ್ಯತಿರಿಕ್ತವಾಗುವದಿಲ್ಲ. ಸದರಿಯವರ ನಡುವೆ ಆದ ಪಾಲು ವಾಟಣಿಯಲ್ಲಿ ಜಮೀನು ರಿ.ಸ.ನಂಬರ 188 ರಲ್ಲಿ 8 ಎಕರೆ 2 ಗುಂಟೆ 1ನೇ ಪ್ರತಿವಾಧಿಯ ತಂದೆ ಬೈಲಪ್ಪ ಇವರ ಪಾಲಿಗೆ ಮತ್ತು ಸದರಿ ಚನ್ನಪ್ಪ ಬಸಪ್ಪ ಗೌಡ್ರ ಇವರ ಪಾಲಿಗೆ 8 ಎಕರೆ ಕ್ಷೇತ್ರ ಬಂದಿರುತ್ತದೆ. ಸದರಿ ಚನ್ನಪ್ಪ ಬಸಪ್ಪ ಗೌಡ್ರ ತನ್ನ ಪಾಲಿಗೆ ಬಂದ 8 ಎಕರೆ ಕ್ಷೇತ್ರದಲ್ಲಿ 4 ಎಕರೆ ತಾನು ಇಟ್ಟುಕೊಂಡು ಉಳಿದ 4 ಎಕರೆ ಬಾಗವನ್ನು ತನ್ನ ಸೊಸೆಯಾದ 2ನೇ ವಾದಿ ರುದ್ರವ್ವಾ ಇವಳ ಹಿಸ್ಸೆಗೆ ಕೊಟ್ಟಿರುತ್ತಾರೆ. ಆ ಪ್ರಕಾರ ಸದರಿ ಜಮೀನಿನ ಮಂಜೂರಾದ ಬಗ್ಗೆ ತುಂಬಬೇಕಾದ ಪ್ರೀಮಿಯಂ ಹಣವನ್ನು ಅವರವರ ಕ್ಷೇತ್ರದ ಪ್ರಕಾರ ಪಾಲು ಮಾಡಿ ಹಂಚಲಾಗಿದೆ. ಆ ಬಗ್ಗೆ ಡ.ನಂಬರ 1105 ಮಂಜೂರಾಗಿರುತ್ತದೆ. 1ನೇ ಪ್ರತಿವಾದಿಯ ತಂದೆ ಸದರಿ ಅಪಸಾತ ಪಾಲು ವಿಬಾಗದ ಅನುಸಾರ ತನ್ನ ಪಾಲಿಗೆ ಬಂದ ಪ್ರಿಮಿಯಂ ಹಣವನ್ನು ಭರಾಯಿಸಿರುತ್ತಾರೆ.

10) 1981 ರಿಂದಾ 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರು ಸದರಿ ಜಮೀನಿನ 8 ಎಕರೆ 2 ಗುಂಟೆ ಜಮೀನಿನ ಸಂಪೂರ್ಣ ಮಾಲಿಕನಾಗಿರುತ್ತಾನೆ. 1981 ರಿಂದಾ ಸದರಿ ಬೈಲಪ್ಪ ಇವನು ಸತತವಾಗಿ, ಯಾರದೇ ಅಡ್ಡಿ ಆತಂಕ ಇಲ್ಲದೆ ಸಂಪೂರ್ಣ ಮಾಲಕೀನಾತೆಯಿಂದಾ ವಾದಿಯರಿಗೆ ಮತ್ತು ಅವರ ಪೂರ್ವಜರಿಗೆ ತಿಳಿಯುವಂತೆ ಪ್ರತ್ಯಕ್ಷ ಕಬಜಾ ವಹಿವಾಟ ಮಾಡಿಕೊಂಡು ಬಂದಿರುತ್ತಾರೆ. 1981 ರಿಂದಾ ಇಲ್ಲಿಯವರೆಗೆ ವಾದಿಯರು ಮತ್ತು ಅವರ ಪೂರ್ವಜರಾದ ಚನ್ನಪ್ಪ ಬಸಪ್ಪ ಗೌಡ್ರ ಇವರು ಎಂದಿಗೂ ತಮ್ಮ ಮತ್ತು 1ನೇ ಪ್ರತಿವಾದಿಯ ತಂದೆ ಬೈಲಪ್ಪ ಇವರ ನಡುವೆ ಆದ ಅಪಸಾತ ಪಾಲುವಾಟಣಿಯನ್ನು ಪ್ರಶ್ನಿಸಿರುವದಿಲ್ಲ ಮತ್ತು ಆ ಬಗ್ಗೆ ಆದ ಡ.ನಂಬರ 1105 ನ್ನು ಈವರೆಗೆ ಪ್ರಶ್ನಿಸಿರುವದಿಲ್ಲ. ಸದರಿಯವರು ಎಂದಿಗೂ ದಾವಾ ಆಸ್ತಿಯ ಮೇಲಿನ ತಮ್ಮ ಪ್ರಾಸ್ತಾವಿತ ಹಕ್ಕಿನ ಬಗ್ಗೆ ಪ್ರಶ್ನೆ ಮಾಡಿರುವದಿಲ್ಲ. ಕಾರಣ ಈ ವಿಳಂಬ ಹಂತದಲ್ಲಿ ವಾದಿಯರಿಗೆ ದಾವಾ ಆಸ್ತಿಯ ಮೇಲೆ ಯಾವದೇ ಹಕ್ಕನ್ನು ಕೋರಲು ಬರಲಾರದು. ವಾದಿಯರ ಪ್ರಸ್ತಾವಿತ ಹಕ್ಕು ಕಾಲ ಮಿತಿ ಅಧಿನಿಯಮದ ಅಡಿಯಲ್ಲಿ ಕಾಲ ಮಿತಿ ಮೀರಿದ್ದು ಇದ್ದು, ವಾದಿಯರು ದಾವೆಯಲ್ಲಿ ಕೋರಿದ ಪರಿಹಾರಕ್ಕೆ ಹಕ್ಕುದಾರರು ಇರುವದಿಲ್ಲ.

11) ನಂತರ ದಾವಾ ಜಮೀನು ರಿ.ಸ.ನಂಬರ 188 ರಲ್ಲಿ ಸದರಿ ಬೈಲಪ್ಪ ಇವನ ಪಾಲಿಗೆ ಬಂದ 8 ಎಕರೆ 2 ಗುಂಟೆ ಜಮೀನಿನ ಬಗ್ಗೆ 1ನೇ ಪ್ರತಿವಾದಿ ಮತ್ತು ಸದರಿ ಬೈಲಪ್ಪ ಇವನ ಸಹೋದರನ ಮಗನಾದ 2ನೇ ಪ್ರತಿವಾದಿಯ ನಡುವೆ ಅಪಸಾತನಲ್ಲಿ ಪಾಲು ವಾಟಣಿ ಆಗಿರುತ್ತದೆ. ಸದರಿ ಅಪಸಾತ ಪಾಲು ವಾಟಣಿಯ ಕಾಲಕ್ಕೆ ದಾವಾ ಜಮೀನು ರಿ.ಸ.ನಂಬರ 188/1 ವಿಸ್ತೀರ್ಣ 4 ಎಕರೆ 1 ಗುಂಟೆ ಇದು 1ನೇ ಪ್ರತಿವಾದಿಯ ಪಾಲಿಗೆ ಮತ್ತು ರಿ.ಸ.ನಂಬರ 188/2 ವಿಸ್ತೀರ್ಣ 4 ಎಕರೆ 1 ಗುಂಟೆ 2ನೇ ಪ್ರತಿವಾದಿಯ ಪಾಲಿಗೆ ಬಂದಿರುತ್ತದೆ. ಆ ಪ್ರಕಾರ 1 ಮತ್ತು 2ನೇ ಪ್ರತಿವಾದಿಯರ ಹೆಸರುಗಳು ಸದರಿ ಜಮೀನಿನ ದಾಖಲೆಗಳಲ್ಲಿ ದಾಖಲ ಆಗಿರುತ್ತದೆ. ಕಾರಣ 1ನೇ ಪ್ರತಿವಾದಿ ದಾವಾ ಜಮೀನು ರಿ.ಸ.ನಂಬರ 188/1 ವಿಸ್ತೀರ್ಣ 4 ಎಕರೆ 1 ಗುಂಟೆ ಇದರ ಸಂಪೂರ್ಣ ಮಾಲಿಕರು ಮತ್ತು ಕಬಜಾದಾರರು ಇರುತ್ತಾರೆ ಮತ್ತು 2ನೇ ಪ್ರತಿವಾದಿ ದಾವಾ ಜಮೀನು ರಿ.ಸ.ನಂಬರ 188/2 ವಿಸ್ತೀರ್ಣ 4 ಎಕರೆ 1 ಗುಂಟೆ ಇದರ ಸಂಪೂರ್ಣ ಮಾಲಿಕರು ಮತ್ತು ಕಬಜಾದಾರರು ಇರುತ್ತಾರೆ.

12) ವಾದಿಯರು ಕೂಡಾ 1981 ರಲ್ಲಿ ಆದ ಸದರಿ ಅಪಸಾತ ಪಾಲು ವಾಟಣಿಯನ್ನು ಒಪ್ಪಿಕೊಂಡು ಸದರಿ ಅಪಸಾತ ವಾಟಣಿಯಲ್ಲಿ ತಮ್ಮ ತಮ್ಮಲ್ಲಿ ಹಂಚಿಕೊಂಡ ಬಾಗಗಳನ್ನು ತಮ್ಮ ವಶಕ್ಕೆ ತೆಗೆದುಕೊಂಡು ಕಬಜಾ ವಹಿವಾಟ ಮಾಡುತ್ತಾ ಬಂದಿರುತ್ತಾರೆ. ಅದೇ ರೀತಿ ಸದರಿ ಚನ್ನಪ್ಪ ಬಸಪ್ಪ ಗೌಡ್ರ ಇವರ ಮರಣಾನಂತರ ಅವರ ಹೆಸರಿನಲ್ಲಿದ್ದ ಆಸ್ತಿಗೆ ತಮ್ಮ ಹೆಸರು ದಾಖಲ ಮಾಡಿಸಿಕೊಂಡಿರುತ್ತಾರೆ. ಕಾರಣ ಈ ಹಂತದಲ್ಲಿ ಸದರಿ ಅಪಸಾತ ವಾಟಣಿಯನ್ನು ಪ್ರಶ್ನಿಸಲು ವಾದಿಯರಿಗೆ ಬರಲಾರದು.

13) ವಾದಿಯರು ಎಂದಿಗೂ ದಾವಾ ಆಸ್ತಿಯ ಕಬಜೆಯಲ್ಲಿ ಇರುವದಿಲ್ಲ. ಕಾರಣ ವಾದಿಯರ ಪ್ರಸುತ್ತ ಸ್ವರೂಪದ ಪರಿಹಾರ ಕೋರಿ ಮಾಡಿದ ದಾವೆ ಕಾನೂನು ಅಡಿಯಲ್ಲಿ ನಡೆಯಲಾರದು.

14) 1 ಮತ್ತು 2ನೇ ಪ್ರತಿವಾದಿಯರು ತಮ್ಮ ಮಾಲಕೀಯ ಸದರಿ ದಾವಾದ ಜಮೀನುಗಳನ್ನು ಸಾಕಷ್ಟು ಹಣ ಖರ್ಚು ಮಾಡಿ ಮತ್ತು ತಮ್ಮ ಮತ್ತು ತಮ್ಮ ಕುಟುಂಬದವರ ಅಮೂಲ್ಯವಾದ ದೈಹಿಕ ಶ್ರಮ ಹಾಕಿ ಸದರಿ ಜಮೀನುಗಳನ್ನು ಫಲವತ್ತಾದ ಜಮೀನುಗಳನ್ನಾಗಿ ಮಾಡಿರುತ್ತಾರೆ. ಈ ವಾದಿಯರು 1 ಮತ್ತು 2ನೇ ಪ್ರತಿವಾದಿಯರ ಪಲವತ್ತಾದ ಜಮೀನುಗಳನ್ನು ಎತ್ತಿಹಾಕಬೇಕೆನ್ನುವ ದುರುದ್ದೇಶದಿಂದ ಈಗ ಸುಳ್ಳು ಸಂಗತಿಗಳನ್ನು ಸಾಧಿಸಿ ಈ ದಾವೆಯನ್ನು ಮಾಡಿರುತ್ತಾರೆ.

15) ವಾದಿಯರಿಗೆ ಈ ದಾವೆಯನ್ನು ಮಾಡುವ ಯಾವದೇ ಕಾರಣವೇ ಉಂಟಾಗಿಲ್ಲ. ವಾದಿಯರು ತಮ್ಮ ಮಾಹಿತಿಯಲ್ಲಿ ಇರುವ ಸತ್ಯ ಸಂಗತಿಗಳನ್ನು ಮರೆಮಾಚಿ ಸುಳ್ಳು ಸಂಗತಿಗಳನ್ನು ಸಾದಿಸಿ ಈ ದಾವೆ ಮಾಡಿರುತ್ತಾರೆ.

ಈ ಎಲ್ಲಾಕಾರಣಗಳಿಗಾಗಿ ವಾದಿಯರ ದಾವೆಯನ್ನು ಮಾಹಿತಿಯನ್ನು ಖರ್ಚು ಸಹಿತ ವಜಾ ಗೊಳಿಸಲು ವಿನಂತಿ ಇದೆ.

ಸ್ಥಳ :- ಹುನಗುಂದ

ದಿನಾಂಕ:- 30-5-2023

M. S Gouda

2ನೇ ಪ್ರತಿವಾದಿಯರ ಸಹಿ

**ಧೃಢೀಕರಣ**

ಇದರಲ್ಲಿ ನಾನು ಶ್ರೀ ಮರಿಬಸಪ್ಪ ತಂದೆ ಸಂಗನಬಸಪ್ಪ ಗೌಡರ ವಯಾ:47 ಉ:ಒಕ್ಕುಲುತನ ಸಾ॥ ಅಮರಾವತಿ, ತಾ॥ ಹುನಗುಂದ ಸತ್ಯ ಪ್ರಮಾಣ ಪೂರ್ವಕವಾಗಿ ಸಲ್ಲಿಸುವದೇನೆಂದರೆ-

ಪ್ರತಿವಾದ ಪತ್ರ ಮೇಲೆ ವಿವರಿಸಿದ ಯಾವತ್ತೂ ಸಂಗತಿಗಳನ್ನು ನನಗೆ ಓದಿ, ತಿಳಿಸಿ ಹೇಳಿದ್ದು ಅವುಗಳಲ್ಲಿಯ ಯಾವತ್ತೂ ಸಂಗತಿಗಳು ನನ್ನ ಮಾಹಿತಿ ಮತ್ತು ತಿಳುವಳಿಕೆಯ ಮೇರೆಗೆ ನಿಜ ಇರುತ್ತವೆ.

ಸ್ಥಳ :- ಹುನಗುಂದ

ದಿನಾಂಕ:-30-5-2023

M. S Gouda

2ನೇ ಪ್ರತಿವಾದಿಯರ ಸಹಿ

(PRP)

2ನೇ ಪ್ರತಿವಾದಿಯರ ಪರ ವಕೀಲರು

ಅಸಲ ದಾವಾ ನಂ:108/2022

# ಮಾನ್ಯ ಹಿರಿಯ ದಿವಾಣಿ ನ್ಯಾಯಾಧೀಶರು, ಹುನಗುಂದರವರ ನ್ಯಾಯಾಲಯದಲ್ಲಿ

1) ಶ್ರೀ. ಸಂಗಪ್ಪ ತಂದೆ ಚನ್ನಪ್ಪ ಗೌಡ್ರ
ಸಾ॥ ಅಮರಾವತಿ, ತಾ॥ ಹುನಗುಂದ
ವ ಇತರರು.

---ವಾದಿಯರು

--ವಿರುದ್ಧ--

1) ಶ್ರೀ. ಅಮರೇಶ ತಂದೆ ಬೈಲಪ್ಪ ಗೌಡರ
ಸಾ॥ ಅಮರಾವತಿ, ತಾ॥ ಹುನಗುಂದ
ವ ಇತರರರು

----ಪ್ರತಿವಾದಿಯರು

## ಪರಿಶೀಲನಾ ಪ್ರಮಾಣ ಪತ್ರ

ಇದರಲ್ಲಿ ನಾನು ಶ್ರೀ ಮರಿಬಸಪ್ಪ ತಂದೆ ಸಂಗನಬಸಪ್ಪ ಗೌಡರ ವಯಾ:47 ಉ:ಒಕ್ಕಲುತನ ಸಾ॥ ಅಮರಾವತಿ, ತಾ॥ ಹುನಗುಂದ ಸತ್ಯ ಪ್ರಮಾಣಪೂರ್ವಕವಾಗಿ ಹೇಳುವದೇನೆಂದರೆ-

ಈ ದಾವಾದಲ್ಲಿ ನಾನು 2ನೇ ಪ್ರತಿವಾದಿ ಇರುತ್ತೇನೆ. ನಾನು ಈ ಪ್ರಕರಣದಲ್ಲಿ ಈ ದಿನ ನನ್ನ ಪ್ರತಿವಾದ ಪತ್ರ ಸಲ್ಲಿಸಿದ್ದು, ಅದರಲ್ಲಿ ಪ್ಯಾರಾ ನಂ.1 ರಿಂದಾ 15 ರಲ್ಲಿ ವಿಧಾನಿಸಿದ ಯಾವತ್ತೂ ಸಂಗತಿಗಳನ್ನು ನನಗೆ ಓದಿ, ತಿಳಿಸಿಹೇಳಿದ್ದು, ಅವುಗಳು ನನ್ನ ಮಾಹಿತಿ ಮತ್ತು ತಿಳುವಳಿಕೆಯ ಮೇರೆಗೆ ನಿಜ ಇರುತ್ತವೆ ಅಂತಾ ಮಾಡಿದ ಪ್ರಮಾಣ ಪತ್ರ.

Of Corrections
Notary

ಸ್ಥಳ:ಹುನಗುಂದ

ದಿನಾಂಕ :30-5-2023

ಸದರಿಯರ ಪರಿಚಯ ಇದೆ

ವಕೀಲರು

M. S. Gouda
ಪ್ರತಿಜ್ಞಾಧಾರಕರು

NOTARY
G.M.VASTRAD.
HUNGUND-587118
KARNATAKA
Reg No:12426
GOVT OF INDIA

SWORN TO BEFORE ME

G.M.VASTRAD.
M.A.LL.B.(Spl)
Advocate & Notary
HUNGUND-587118